**ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದಕ್ಷಿಣ ಕನ್ನಡ ಜಿಲ್ಲಾ ಶಾಖೆಗೆ**
**2025–26 ರಿಂದ ಮೂರು ವರ್ಷಗಳ ಅವಧಿಗೆ ಆಡಳಿತ ಮಂಡಳಿಗೆ 10 ಸದಸ್ಯರ ಆಯ್ಕೆ ಬಗ್ಗೆ ಚುನಾವಣೆ**
**ಸ್ಪರ್ಧಿಸುವ ಅಭ್ಯರ್ಥಿ/ ಮತದಾರ ಸದಸ್ಯರಿಗೆ ಸೂಚನೆಗಳು :–**

1. ದಿನಾಂಕ **29.01.2026** (ಗುರುವಾರ) ರಿಂದ **04.02.2026** (ಗುರುವಾರ) ರವರೆಗೆ ಪೂರ್ವಾಹ್ನ **11.00** ಗಂಟೆಯಿಂದ ಮಧ್ಯಾಹ್ನ **3.00** ಗಂಟೆಯವರೆಗೆ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಶತಮಾನೋತ್ಸವ ಕಟ್ಟಡ, ಮಂಗಳೂರು ಕಛೇರಿಯಲ್ಲಿ ನೇಮಕ ಮಾಡಲಾದ ಚುನಾವಣಾಧಿಕಾರಿಯವರಿಗೆ ಅಥವಾ ಅವರಿಂದ ಅಧಿಕೃತಗೊಂಡವರಿಗೆ ನಾಮಪತ್ರವನ್ನು ಸಲ್ಲಿಸಲು ಅವಕಾಶ ಇರುತ್ತದೆ.

2. ದಿನಾಂಕ **14.10.2025** ರಂದು ನಡೆದ ವಾರ್ಷಿಕ ಸರ್ವ ಸದಸ್ಯರ ಸಭೆಯ ತೀರ್ಮಾನದಂತೆ ಎಲ್ಲಾ ಸದಸ್ಯರ ಪಟ್ಟಿಯನ್ನು ದಿನಾಂಕ **14.10.2025** ರವರೆಗೆ ಇಂದೀಕರಿಸಿ ಸಂಸ್ಥೆಯ ವೆಬ್‌ಸೈಟ್ www.redcrossdk.org ರಲ್ಲಿ ಅಳವಡಿಸಲಾಗಿದೆ ಹಾಗೂ ಸದ್ರಿ ಮತದಾರರ ಪಟ್ಟಿಯಲ್ಲಿರುವ ಎಲ್ಲಾ ಸದಸ್ಯರಿಗೆ ವಾರ್ಷಿಕ ಸರ್ವ ಸದಸ್ಯರ ಸಭೆಯ ತೀರ್ಮಾನದಂತೆ ಚುನಾವಣಾ ತಿಳುವಳಿಕೆ ಪತ್ರವನ್ನು ಕಳುಹಿಸಿಕೊಡಲಾಗಿದೆ.

3. ನಾಮಪತ್ರದ ನಮೂನೆಗಳನ್ನು ಕಛೇರಿ ಅವಧಿಯಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಶತಮಾನೋತ್ಸವ ಕಟ್ಟಡ, ಮಂಗಳೂರುನಲ್ಲಿರುವ ಚುನಾವಣಾಧಿಕಾರಿ ಕಛೇರಿಯಲ್ಲಿ ಪಡೆಯಬಹುದು.

4. ನಾಮಪತ್ರ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಮತ್ತು ಮತದಾರರು ದಿನಾಂಕ **14.10.2025** ರೊಳಗೆ ದ.ಕ ಜಿಲ್ಲಾ ರೆಡ್‌ಕ್ರಾಸ್ ಸಂಸ್ಥೆಯ ನೋಂದಾಯಿತ ಸದಸ್ಯರಾಗಿರಬೇಕು.

5. ನಾಮಪತ್ರ ಸಲ್ಲಿಸುವ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ಮೊದಲು ಕಛೇರಿಯಲ್ಲಿ ರೂ. 500/– (ರೂಪಾಯಿ ಐದು ನೂರು ಮಾತ್ರ) ಠೇವಣಿ ಪಾವತಿಸಿ, ಭರ್ತಿ ಮಾಡಿದ ನಾಮಪತ್ರದ ನಮೂನೆಯೊಂದಿಗೆ ಠೇವಣಿ ಪಾವತಿಸಿದ ರಶೀದಿಯನ್ನು ಜೋಡಿಸಿ ಚುನಾವಣಾಧಿಕಾರಿಗೆ ಖುದ್ದಾಗಿ ಹಾಜರಿದ್ದು ಸಲ್ಲಿಸಬೇಕಾಗುತ್ತದೆ.

6. ನಾಮಪತ್ರ ಸಲ್ಲಿಸುವ ಅಭ್ಯರ್ಥಿಗಳು ಅಪೇಕ್ಷಿಸುವ ಚುನಾವಣಾ ಚಿಹ್ನೆಯ ಪಟ್ಟಿಯನ್ನು ಚುನಾವಣಾಧಿಕಾರಿಯಿಂದ ಪಡೆದು ತಮ್ಮ ಕೋರಿಕೆಯ ಚಿಹ್ನೆಯನ್ನು ನಾಮಪತ್ರದಲ್ಲಿ ನಮೂದಿಸಿ ಚುನಾವಣಾಧಿಕಾರಿಗೆ ನೀಡುವುದು.

7. ನಾಮಪತ್ರಗಳ ಪರಿಶೀಲನೆಯನ್ನು ದಿನಾಂಕ **05.02.2026** (ಗುರುವಾರ)ರಂದು **ಪೂರ್ವಾಹ್ನ 11.00** ಗಂಟೆಗೆ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಶತಮಾನೋತ್ಸವ ಕಟ್ಟಡದ ಚುನಾವಣಾಧಿಕಾರಿ ಕಛೇರಿಯಲ್ಲಿ ಚುನಾವಣಾಧಿಕಾರಿಯವರು ಪರಿಶೀಲನೆ ನಡೆಸಲಿರುವರು, ಆ ಸಮಯದಲ್ಲಿ ಅಭ್ಯರ್ಥಿಗಳು ಹಾಜರಿರಬಹುದು.

8. ನಾಮಪತ್ರಗಳ ಪರಿಶೀಲನೆ ಮುಗಿದ ನಂತರ ಕ್ರಮಬದ್ಧ ನಾಮಪತ್ರಗಳ ಪಟ್ಟಿಯನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಮಂಗಳೂರು ಕಛೇರಿಯ ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸಲಾಗುವುದು.

9. ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳು ದಿನಾಂಕ **07.02.2026** (ಶನಿವಾರ) ರಂದು ಮಧ್ಯಾಹ್ನ **3.00** ಗಂಟೆಯೊಳಗೆ ಚುನಾವಣಾಧಿಕಾರಿಯವರಿಗೆ ಲಿಖಿತವಾಗಿ ತಿಳಿಸಿ, ಖುದ್ದಾಗಿ ಹಾಜರಿದ್ದು ಸಲ್ಲಿಸಿದ ನಾಮಪತ್ರವನ್ನು ಹಿಂಪಡೆಯಬಹುದು.

10. ದಿನಾಂಕ **07.02.2026** (ಶನಿವಾರ) ರಂದು ಅಪರಾಹ್ನ **3.00** ಗಂಟೆಗೆ ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವ ಪ್ರಕ್ರಿಯೆ ಮುಕ್ತಾಯವಾದ ಕೂಡಲೇ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಮಂಗಳೂರು ಕಛೇರಿಯ ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸಲಾಗುವುದು.

11. ಚುನಾವಣೆ ಅವಶ್ಯವಿದ್ದಲ್ಲಿ ದಿನಾಂಕ **22.02.2026** (ರವಿವಾರ) ರಂದು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ, ಶತಮಾನೋತ್ಸವ ಕಟ್ಟಡದ 1ನೇ ಮಹಡಿಯಲ್ಲಿ ಪೂರ್ವಾಹ್ನ **8.00** ಗಂಟೆಯಿಂದ ಸಾಯಂಕಾಲ **5.00** ಗಂಟೆಯವರೆಗೆ ಮತದಾನವನ್ನು ನಡೆಸಲಾಗುವುದು.

12. ಸದಸ್ಯ ಮತದಾರರು ಮತ ಚಲಾಯಿಸುವ ಬಗ್ಗೆ ರೆಡ್‌ಕ್ರಾಸ್ ಸಂಸ್ಥೆಯಿಂದ ಪಡೆದಿರುವ ಭಾವಚಿತ್ರವಿರುವ ಗುರುತಿನ ಚೀಟಿ ಅಥವಾ ಅವರು ಅಧಿಕೃತವಾಗಿ ಹೊಂದಿರುವ ಭಾವಚಿತ್ರವಿರುವ ಗುರುತಿನ ಚೀಟಿಯನ್ನು (ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿ, ಆಧಾರ್, ವಾಹನ ಚಲಾವಣೆ ಪರವಾನಿಗೆ ಇತ್ಯಾದಿ) ಹಾಜರುಪಡಿಸಬೇಕು.

13. ಮತಗಳ ಎಣಿಕೆಯನ್ನು ದಿನಾಂಕ **23.02.2026** (ಸೋಮವಾರ) ರಂದು ಪೂರ್ವಾಹ್ನ **9.00** ಗಂಟೆಯಿಂದ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ, ಶತಮಾನೋತ್ಸವ ಕಟ್ಟಡದ 1ನೇ ಮಹಡಿ, ಪ್ರೇರಣಾ ಸಭಾಂಗಣದಲ್ಲಿ ನಡೆಸಲಾಗುವುದು. ಆ ಸಮಯದಲ್ಲಿ ಅಭ್ಯರ್ಥಿಗಳು ಹಾಜರಿರಬಹುದು.

14. ಮತಗಳ ಎಣಿಕೆ ನಡೆದು ಫಲಿತಾಂಶ ಘೋಷಣೆ ಆದ ನಂತರ ಬಹು ಅಭ್ಯರ್ಥಿಗಳ ಚುನಾವಣೆಯಲ್ಲಿ ಠೇವಣಿ ಹಿಂದಿರುಗಿಸುವ ಕ್ರಮವನ್ನು ಅನುಸರಿಸಲಾಗುವುದು.

**ವಿ.ಸೂ : ರೆಡ್‌ಕ್ರಾಸ್ ಸದಸ್ಯರಿಗೆ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲು ಅವರ ವ್ಯಾಟ್ಸ್ ಆಫ್ ಮೊಬೈಲ್ ನಂಬ್ರ ನೀಡಲು ಕೋರಿದೆ. (ಕಛೇರಿ ಈಮೇಲ್ ಐಡಿ : ircsdkd@gmail.com ಅಥವಾ ಕಛೇರಿಗೆ ಫೋನ್ (0824–2423755 / 9606866210) ಮಾಡಿ ಕೂಡ ತಿಳಿಸಬಹುದು).**

ಚುನಾ RETURNING OFFICER
ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ದ.ಕ. ಜಿಲ್ಲಾ ಶಾಖೆ,
ಮಂಗಳೂರು

**ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದಕ್ಷಿಣ ಕನ್ನಡ ಜಿಲ್ಲಾ ಶಾಖೆಗೆ**

**2025-26 ರಿಂದ ಮೂರು ವರ್ಷಗಳ ಅವಧಿಗೆ ಆಡಳಿತ ಸಮಿತಿಗೆ ನಡೆಯಲಿರುವ ಚುನಾವಣೆಗೆ ವೇಳಾ ಪಟ್ಟಿ**

**ಒಟ್ಟು ಚುನಾಯಿಸ ಬೇಕಾದ ಸ್ಥಾನಗಳು : 10 (ಹತ್ತು)**

| | | | |
|---|---|---|---|
| 1 | ಚುನಾವಣೆಯಲ್ಲಿ ಮತ ಚಲಾಯಿಸುವ ಸದಸ್ಯರ ಕರಡು ಪಟ್ಟಿಯನ್ನು ಪ್ರಕಟಿಸುವ ದಿನಾಂಕ | : | ದಿನಾಂಕ 19.01.2026 (ಸೋಮವಾರ) ರಂದು ಪೂರ್ವಾಹ್ನ 11.00 ಗಂಟೆ |
| 2 | ಕರಡು ಸದಸ್ಯರ ಪಟ್ಟಿಗೆ ಆಕ್ಷೇಪಣೆಯನ್ನು ಸಲ್ಲಿಸಲು ಕೊನೆಯ ದಿನಾಂಕ | : | ದಿನಾಂಕ 27.01.2026 (ಮಂಗಳವಾರ)ಅಪರಾಹ್ನ 3.00 ಗಂಟೆವರೆಗೆ |
| 3 | ಕ್ರಮ ಸಂಖ್ಯೆ 2 ರಂತೆ ಸ್ವೀಕರಿಸಲಾದ ಆಕ್ಷೇಪಣೆಗಳ ಪರಿಶೀಲನೆ ದಿನಾಂಕ | : | ದಿನಾಂಕ 27.01.2026 (ಮಂಗಳವಾರ) ರಂದು ಅಪರಾಹ್ನ 3.00 ಗಂಟೆಯಿಂದ |
| 4 | ಉಮೇದುವಾರರು ನಾಮಪತ್ರ ಸಲ್ಲಿಸಲು ಪ್ರಾರಂಭಿಸುವ ದಿನಾಂಕ ಮತ್ತು ಸಮಯ | : | ದಿನಾಂಕ 29.01.2026 (ಗುರುವಾರ) ರಂದು ಪೂರ್ವಾಹ್ನ 11.00 ಗಂಟೆಯಿಂದ ಅಪರಾಹ್ನ 3.00 ಗಂಟೆಯವರೆಗೆ |
| 5 | ಉಮೇದುವಾರರು ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ | : | ದಿನಾಂಕ 04.02.2026 (ಬುಧವಾರ) ರಂದು ಅಪರಾಹ್ನ 3.00 ಗಂಟೆಯೊಳಗೆ ಸಲ್ಲಿಸುವುದು. |
| 6 | ನಾಮಪತ್ರ ಪರಿಶೀಲನೆ | : | ದಿನಾಂಕ 05.02.2026 (ಗುರುವಾರ) ರಂದು ಪೂರ್ವಾಹ್ನ 11.00 ಗಂಟೆಗೆ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಶತಮಾನೋತ್ಸವ ಕಟ್ಟಡದ ಚುನಾವಣಾಧಿಕಾರಿ ಕಚೇರಿಯಲ್ಲಿ. |
| 7 | ಅರ್ಹ ಉಮೇದುವಾರರ ನಾಮಪತ್ರ ಪ್ರಕಟಣೆ | : | ಅದೇ ದಿನ ನಾಮಪತ್ರ ಪರಿಶೀಲನೆ ಬಳಿಕ ಸಂಸ್ಥೆಯ ನೋಟಿಸು ಬೋರ್ಡಿನಲ್ಲಿ ಪ್ರಕಟಪಡಿಸಲಾಗುವುದು. |
| 8 | ಉಮೇದುವಾರರು ನಾಮಪತ್ರಗಳನ್ನು ಹಿಂಪಡೆಯಲು ಕೊನೆಯ ದಿನಾಂಕ ಮತ್ತು ಸಮಯ | : | ದಿನಾಂಕ 07.02.2026 (ಶನಿವಾರ) ರಂದು ಅಪರಾಹ್ನ 3.00 ಗಂಟೆಯ ಒಳಗಾಗಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಚುನಾವಣಾಧಿಕಾರಿಯವರಿಗೆ ಅಭ್ಯರ್ಥಿ ವೈಯುಕ್ತಿಕವಾಗಿ ಸಲ್ಲಿಸುವುದು. |
| 9 | ಹಿಂಪಡೆದುಕೊಂಡ ನಾಮಪತ್ರಗಳ ಪ್ರಕಟಣೆ | : | ದಿನಾಂಕ 07.02.2026 (ಶನಿವಾರ) ರಂದು ನಾಮಪತ್ರ ಹಿಂಪಡೆದುಕೊಂಡ ಬಳಿಕ ಸಂಸ್ಥೆಯ ನೋಟೀಸು ಬೋರ್ಡಿನಲ್ಲಿ ಪ್ರಕಟಪಡಿಸಲಾಗುವುದು. |
| 10 | ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಚಿಹ್ನೆ ಹಂಚಿಕೆ ನಡೆಸುವ ದಿನಾಂಕ ಮತ್ತು ಸಮಯ | : | ದಿನಾಂಕ 09.02.2026 (ಸೋಮವಾರ) ರಂದು ಅಪರಾಹ್ನ 3.30 ಗಂಟೆಗೆ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಚಿಹ್ನೆ ಹಂಚಿಕೆಯನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಶತಮಾನೋತ್ಸವ ಕಟ್ಟಡದ ಚುನಾವಣಾಧಿಕಾರಿ ಕಚೇರಿಯಲ್ಲಿ ಮಾಡಲಾಗುವುದು. |
| 11 | ಉಮೇದುವಾರರ ಅಂತಿಮ ಪಟ್ಟಿ ಪ್ರಕಟಣೆ | : | ದಿನಾಂಕ 10.02.2026 (ಮಂಗಳವಾರ) ರಂದು ನಾಮಪತ್ರ ಹಿಂತೆಗೆದುಕೊಂಡ ಬಳಿಕ ಮತ್ತು ಚಿಹ್ನೆ ಹಂಚಿಕೆ ಪ್ರಕ್ರಿಯೆ ಮುಗಿದ ನಂತರ ಸಂಸ್ಥೆಯ ನೋಟೀಸು ಬೋರ್ಡಿನಲ್ಲಿ ಪ್ರಕಟಪಡಿಸಲಾಗುವುದು. |
| 12 | ಚುನಾವಣೆ ಅಗತ್ಯವಿದ್ದಲ್ಲಿ ಚುನಾವಣೆ ನಡೆಯುವ ದಿನಾಂಕ, ಸ್ಥಳ ಮತ್ತು ಸಮಯ | : | ದಿನಾಂಕ 22.02.2026 (ರವಿವಾರ) ರಂದು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಶತಮಾನೋತ್ಸವ ಕಟ್ಟಡದ 1 ನೇ ಮಹಡಿಯಲ್ಲಿ ಪೂರ್ವಾಹ್ನ 8.00 ಗಂಟೆಯಿಂದ ಸಾಯಂಕಾಲ 5.00 ಗಂಟೆಯವರೆಗೆ. |
| 13 | ಮತಗಳ ಎಣಿಕೆ ಮತ್ತು ಚುನಾವಣಾ ಫಲಿತಾಂಶ ಘೋಷಣೆ | : | ಮತಗಳ ಎಣಿಕೆಯನ್ನು ದಿನಾಂಕ 23.02.2026 (ಸೋಮವಾರ) ರಂದು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಶತಮಾನೋತ್ಸವ ಕಟ್ಟಡದ 1 ನೇ ಮಹಡಿ, ಪ್ರೇರಣಾ ಸಭಾಂಗಣದಲ್ಲಿ ಪೂರ್ವಾಹ್ನ 9.00 ಗಂಟೆಯಿಂದ ನಡೆಸಲಾಗುವುದು. ಮತಗಳ ಎಣಿಕೆ ಮುಗಿದ ನಂತರ ಗರಿಷ್ಠ ಕ್ರಮಬದ್ಧ ಮತಗಳನ್ನು ಪಡೆದ ಅಭ್ಯರ್ಥಿಗಳ ಕುರಿತು ಫಲಿತಾಂಶ ಘೋಷಿಸಲಾಗುವುದು. |

ಸ್ಥಳ : ಮಂಗಳೂರು
ದಿನಾಂಕ : 16.01.2026

ಚುನಾವಣಾಧಿಕಾರಿ,
ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ದ.ಕ. ಜಿಲ್ಲಾ ಶಾಖೆ,
ಮಂಗಳೂರು
RETURNING OFFICER